

ಗಿರಾಕಿ: ದೇವಸ್ಥಾನ ಬೀದಿಗೆ ಎಷ್ಟಾಗ್ತದೆ?

ಆಟೋದವ: ಎಪ್ಪತ್ತು ರೂಪಾಯಿ ಸಾರ್.

ಗಿರಾಕಿ: ಎಡವಿ ಬಿದ್ರೆ ಸಿಗುತ್ತೆ. ಅದ್ಯಾಕಪ್ಪ ಎಪ್ಪತ್ತು ರೂಪಾಯಿ.

ಆಟೋದವ:ಇಲ್ಲೇ ಎಡವಿ ಬೀಳ್ರಿ. ಸೀದಾ ದೇವರ ಪಾದಕ್ಕೇ ಹೋಗಿ ಬೀಳ್ತೀರಿ...

★★★

ಬಚ್ಚಲು ಬಾಗಿಲನ್ನು ದಢಾರನೆ ಮುಚ್ಚಿಕೊಂಡು ಒಳಗೆ ಹೋದ ಮೊಮ್ಮಗನನ್ನು ಕುರಿತು:

ತಾತ: ಬಾಗಿಲು ಮುರಿದು ಹೋಗುತ್ತೆ, ಹಾಗೆ ದಢಾರನೆ ಹಾಕ್ಕೋ ಬೇಡ ಅಂತ ಅದೆಷ್ಟು ಸಲ ಹೇಳಿಲ್ಲ. ಮೊದಲು ಬಾಗಿಲು ತೆಗೆದು ಈಚೆ ಬಾ 'ನಿನ್ನ ವಿಚಾರಿಸ್ಕೋತೀನಿ...

ಏಯ್ ಬಾಗಿಲು ತೆಗೀತೀಯೋ ಇಲ್ಲ. ನಾನೇ ಬಾಗಿಲು ಮುರಿದು ಒಳಗೆ ಬರಲೋ...!

★★★

ಕೈಯಲ್ಲಿ ಇಂಗ್ಲಿಷ್ ಪೇಪರ್ ಹಿಡಿದ ಹೆಂಡತಿ, 'ಕನ್ನಡದಲ್ಲಿ ಅದೆಷ್ಟು ಹೊಲಸು ಚಿತ್ರ ತೆಗೀತಾರ್ರೀ. ಇಲ್ಲಿ ನೋಡಿ 'ಬೀಡಿ ಸೇದಿ ಬಂದ' ಅಂತ ಒಂದು ಚಿತ್ರದ ಹೆಸರು!'

ಪತ್ರಿಕೆ ಇಸಿದುಕೊಂಡ ಗಂಡ: ಅಯ್ಯೋ.. 'ಬೀಡಿ ಸೇದಿ ಬಂದ' ಅಲ್ಲ ಕಣೆ. ಇದು 'ಬಿಡಿಸದ ಬಂಧ' ಅಂತ ಬಿಡಿಸಿ ಓದ್ಕೋಬೇಕು.

★★★

ಡಾಕ್ಟರು: ನೋಡಿ ನಿಮ್ಮ ಮಗಳಿಗೆ ಯಾರದೇ ಸತ್ತ ಸುದ್ದಿ ಸಡನ್ನಾಗಿ ತಿಳಿಸಲು ಹೋಗಬೇಡಿ. ಅವಳಿಗೆ ಅಘಾತವಾಗ್ತದೆ!

ತಂದೆ: ಇಲ್ಲ ಡಾಕ್ಟ್ರೇ, ನಾವು ಯಾರ ಸತ್ತ ಸುದ್ದಿಯನ್ನು ಕೂಡಲೆ ಹೇಳಕ್ಕೆ ಹೋಗಲ್ಲ. ನೆಹರು ಸತ್ತ ಸುದ್ದಿ ಕೂಡಾ ಮೊನ್ನೆ ಮೊನ್ನೆ ಹೇಳಿದ್ದೇವೆ.

★★★

ಗಂಡ: ಅಲ್ಲ ಕಣೆ ನಂಗೊಂದು ಡೌಟು. ಶ್ರೀಮನ್ನಾರಾಯಣನಿಗೆ ಯಾವಾಗ್ಲೂ ಕಾಲು ನೋಯ್ತಾ, ಇರುತ್ತಾ?.

ಹೆಂಡತಿ: ಕಾಲು ನೋವಿಲ್ಲ. ಏಂಥದೂ ಇಲ್ಲ. ತಾನು ಗಂಡಸು ಅನ್ನೋ ಧಿಮಾಕು ಅವನಿಗೆ. ಅದಕ್ಕೇ ಹಾಗೆ. ಥತ್ ಗಂಡಸು ಜಾತೀನೇ ಇಷ್ಟು.

(ಸಂ) ವಿ.ಪ್ರಾಣೇಶ ರಾವ್


ಉಚಿತ

ತಪಾಸಣೆ ಪ್ರತಿ ಬುಧವಾರ ಸಮಯ ಬೆಳಗ್ಗೆ 8:00 ರಿಂದ ರಾತ್ರಿ 8:00ರವರೆಗೆ


ಕ್ಯಾರಿ ಪ್ರನಾಳ ಶಿಶು ಕೇಂದ್ರ

ಫರ್ಟಿಲಿಟಿ

Center for Assisted Reproduction Embryology & Endoscopy

#324, 2ನೇ ಮಹಡಿ, ಏರ್‌ಟೈಲ್ ಆಫೀಸ್ ಮೇಲೆ, ಆರ್.ಡಿ. ಕಾಂಪ್ಲೆಕ್ಸ್, 1ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ, 3ನೇ ಹಂತ, ಬಸವೇಶ್ವರನಗರ, ಬೆಂಗಳೂರು - 560 079.






ಬಂಜೆತನ ನಿವಾರಣ ಹಾಗು ಪ್ರನಾಳ ಶಿಶು ಕೇಂದ್ರ

"ಮಕ್ಕಳಿಲ್ಲದ ದಂಪತಿಗಳಿಗೆ ಒಂದು ಆಶಾಕಿರಣ"

ಮಕ್ಕಳಿಗಾಗಿ ಹಂಬಲಿಸುತ್ತಿದ್ದೀರಾ? ನಿರಾಶರಾಗಬೇಡಿ

ನಿಮ್ಮ ಸಂತಾನ ಸಮಸ್ಯೆ ಬಗ್ಗೆ ಹೆಚ್ಚಿನ ತಿಳುವಳಿಕೆ ಅದರ ಕಾರಣಗಳು, ಅದಕ್ಕೆ ಸೂಕ್ತ ಸಲಹೆ ಹಾಗೂ ಪರೀಕ್ಷೆ ಮತ್ತು ವೈಜ್ಞಾನಿಕ ರೀತಿಯ ಚಿಕಿತ್ಸೆ ಪಡೆಯುವ ಅವಕಾಶ ಕಡಿಮೆ ವೆಚ್ಚದಲ್ಲಿ ಪರಿಹಾರ.

- ಅಂಡಾಣು ಹಾಗು ವೀರ್ಯಾಣು ಬ್ಯಾಂಕಿಂಗ್
- ಫ್ರೋಜೋನ್ ಭ್ರೂಣ ಟ್ರಾನ್ಸ್‌ಫರ್
- ಅಂಡ್ರೋಲಜಿ ಮತ್ತು ಬಯೋಕೆಮಿಸ್ಟ್ರಿ
- ಅಲ್ಟ್ರಾಸೌಂಡ್ ಮತ್ತು ಡಯಾಗ್ನಿಸ್ಟಿಕ್ ಲ್ಯಾಬ್
- ART ಮತ್ತು ಭ್ರೂಣಶಾಸ್ತ್ರ ತರಬೇತಿ

- IUI, IVF, ICSI, IMSI, PESA, TESA

ಡೇ ಕೇರ್ ಎಂಡೋಸ್ಕೋಪಿಕ್ ಸರ್ಜರಿ

- ಡಯಾಗ್ನೋಸ್ಟಿಕ್ ಮತ್ತು ಅಪರೇಟಿವ್ ಹಿಸ್ಟರೋಸ್ಕೋಪಿ
- ಡಯಾಗ್ನೋಸ್ಟಿಕ್ ಮತ್ತು ಅಪರೇಟಿವ್ ಲ್ಯಾಪ್ರೋಸ್ಕೋಪಿ

Tel : 80 42244595 +91 84949 12345

www.careefertility.com